ಓ. ಎಸ್. ನಂಃ .29-2015

ಪಿ. ಡಬ್ಲ್ಯೂಃ 1

ದಿಃ 16-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಲ್ ಎಸ್ **2** ನೇ ಪ್ರತಿವಾದಿ ಪರ ವಕೀಲರಿಂದ ಃ

ನನ್ನ ಹೆಸರಿನಲ್ಲಿ ಒಂದೇ ಆಸ್ತಿ ಇರುತ್ತದೆ . ಅದರ ಸರ್ವೆ ನಂ 14/10, 2 ಎಕರೆ 26 ಗುಂಟೆ ಇರುತ್ತದೆ. ಅದು ಹರಪನಹಳ್ಳಿ ಹದ್ದಿಯಲ್ಲಿ ಬರುತ್ತದೆ . ಬಧ್ರಾಪುರದಲ್ಲಿ ನನ್ನ ಮನೆ ಇದೆ ಎಂದರೆ ಸರಿ. ಬಧ್ರಾಪುರದಲ್ಲಿ ನನಗೆ 4 ಮನೆ ಇರುತ್ತವೆ. ಸದರಿ ಮನೆಗಳು ನಮ್ಮ ಅಪ್ಪ ಚಂದ್ರಶೇಖರ ಅವರ ಹೆಸರಿನಲ್ಲಿ ಇರುತ್ತದೆ. ಉಮೇಶಯ್ಯ ಅವರ ಹೆಸರಿನಲ್ಲಿ ಅಂದಲಗಿಯಲ್ಲಿ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯು ಈಗ ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ಬಧ್ರಾಪುರದಲ್ಲಿ ಇರುತ್ತಾರೆ ಎಂದರೆ ಸರಿ ನಾನು ಅಷ್ಟೇ ಅಂದಲಗಿಯಲ್ಲಿ ಇರುತ್ತೇನೆ ಎಂದರೆ ಸಾಕ್ಷಿಯು ಅಲ್ಲಿಯು ಮತ್ತು ಇಲ್ಲಿಯೂ ಇರುತ್ತೇನೆ ಎಂದು ನುಡಿಯುತ್ತಾರೆ . ಅಂದಲಗಿಯಲ್ಲಿ ನೀವು ಯಾಕೆ ಇರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ದೊಡ್ಡಪ್ಪ ಅಲ್ಲಿ ಇದ್ದು ಅವರಿಗೆ ಗಂಡು ಮಕ್ಕಳು ಇಲ್ಲದೇ ಇರುವುದರಿಂದ ನಾನು ಹೋಗುವುದು ಬರುವುದು ಮಾಡುತ್ತೇನೆ ಎಂದು ನುಡಿಯುತ್ತಾರೆ.

ನನ್ನ ದೊಡ್ಡಪ್ಪ ಕಾಂತಯ್ಯ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರ ಎಲ್ಲ ಆಸ್ತಿಗಳಿಗೆ ನನ್ನ ಹೆಸರು ಉಮೇಶಯ್ಯ ತಂದೆ ಕಾಂತಯ್ಯ ಎಂದು ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಜನನ ತಂದೆ ಹೆಸರು ಚಂದ್ರಶೇಖರಯ್ಯ ಎಂದರೆ ಸರಿ. ಈ ಎಲ್ಲ ನಮೂದುಗಳು ನನ್ನ ಹೆಸರಿನಲ್ಲಿ 30 ವರ್ಷಗಳಿಂದ ಬರುತ್ತಿದೆ . ಈ ದಾವೆಯನ್ನು ಯಾಕೆ ಹಾಕಿರುತ್ತೇನೆ ಎಂದು ನನಗೆ ಗೊತ್ತು, ನನ್ನ ತಂದೆಯ ಹಕ್ಕು ಬೇಕು ಹಾಕಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ದಾವೆಯನ್ನು ಆಸ್ತಿ 14 ಮತ್ತು 15 ಕುರಿತು ಹಾಕಿರುತ್ತೇನೆ. ಆಸ್ತಿ 15 ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆಸ್ತಿ 14 ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ಆಸ್ತಿ 15/1 ಮತ್ತು 15/2 ಸದಾಶಿವಯ್ಯ ಚಂದ್ರಶೇಖರಯ್ಯ ಸಾಲಿಮಠ ಇವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆ ಮತ್ತು ಅಣ್ಣ ರವರ ಕಬ್ಜೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆಸ್ತಿ 15/1 ಮತ್ತು 15/2 ನ್ನು ಕರ್ನಾಟಕ ಬೂದಾನ ಇಲಾಖೆಯು ಸದಾಶಿವಯ್ಯ ಚಂದ್ರಶೇಖರಯ್ಯ ಸಾಲಿಮಠ ಇವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದಾಶಿವಯ್ಯರವರು ಇದೇ ಊರಲ್ಲಿ 20 ವರ್ಷಗಳ ಹಿಂದೆ ಈ ಆಸ್ತಿಗೆ ಯಾರು ತಕರಾರು ಮಾಡಬಾರದೆಂದು ಒಂದು ದಾವೆಯನ್ನು ಹಾಕಿದರು ಎಂದರೆ ಸರಿಯಲ್ಲ. ಈ ಆಸ್ತಿ ಇದೇ ನ್ಯಾಯಾಲಯದಲ್ಲಿ ಸದಾಶಿವಯ್ಯ ರವರ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ 14/10 ನನ್ನ ಹೆಸರಿನಲ್ಲಿ ಇದೆ ಮತ್ತು ಅದು ಕಾಂತಯ್ಯರವರಿಂದ ನನಗೆ ಬಂದಿರುತ್ತದೆ ಎಂದರೆ ಸರಿ. ಹಿರೇಮಠ ಉಮೇಶಯ್ಯ ಬಿನ್ ಕಾಂತಯ್ಯ ಎಂದು ನಮೂದು ಇದೆ ಎಂದರೆ ಸರಿ. ಕಾಂತಯ್ಯರವರಿಗೆ ಇರುವ ಎಲ್ಲ ಆಸ್ತಿಗಳನ್ನು ನಾನೇ ಮಾಡುತ್ತೇನೆ ಎಂದರೆ ಸರಿ. ನನಗೆ ಎಷ್ಟು ಸರ್ವೆ ನಂಬರಗಳ ಮೇಲೆ ಈ ದಾವೆಯನ್ನು ಹಾಕಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಆಸ್ತಿ 15/1 ಮತ್ತು 15/2 ಗಳಿಗ ಸದಾಶಿವಯ್ಯ ಚಂದ್ರಶೇಖರಯ್ಯ ಸಾಲಿಮಠ ರವರು ಒಬ್ಬನೇ ಮಾಲೀಕರು ಎಂದರೆ ಸಾಕ್ಷಿಯು ಇಲ್ಲ ನಮ್ಮ ತಂದೆ ಮತ್ತು ಅಣ್ಣ ಕೂಡ ಇರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ನಿಮ್ಮ ಅಣ್ಣ ಆಸ್ತಿ ನಂ 15/1 ಮತ್ತು 15/2 ಗೆ ಹೇಗೆ ಮಾಲಿಕರಾಗುತ್ತಾರೆ ಎಂದರೆ ಸಾಕ್ಷಿಯು ಅವರ ಹೆಸರು ದಾಖಲೆಯಲ್ಲಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಅದು ಯಾವ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ನಂ 15/1 ಮತ್ತು 15/2 ಗಳು ಸದಾಶಿವಯ್ಯ ಚಂದ್ರಶೇಖರಯ್ಯ ಸಾಲಿಮಠರವರ ಸ್ವಯಾರ್ಜಿತ ಆಸ್ತಿ ಇದ್ದರೂ ನಾನು ನನ್ನ ತಂದೆ ಮತ್ತು ಅಣ್ಣ ಅವರದ್ದು ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಸದಾಶಿವಯ್ಯ ರವರ ಹೆಸರು ಅದಕ್ಕೆ ನಮೂದು ಇರುತ್ತದೆ. ಯಾವ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುವಿರಿ ಎಂದರೆ ಗೊತ್ತಿಲ್ಲ. ಆಸ್ತಿ ನಂ 15/1 ಮತ್ತು 15/2 ಗಳು ಸದಾಶಿವಯ್ಯ ಚಂದ್ರಶೇಖರಯ್ಯ ಸಾಲಿಮಠರವರ ಸ್ವಯಾರ್ಜಿತ ಆಸ್ತಿ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕಾಂತಯ್ಯರವರ ಸಾಕು ಮಗೆ ಇರುತ್ತೇನೆ. ಕಾಂತಯ್ಯರವರಿಗೆ ನಾನು ದತ್ತಕ ಹೋಗಿಲ್ಲ. ಅವರದು ನಾನು ಸಾಕು ಮಗ ಇರುತ್ತೇನೆ. ಕಾಂತಯ್ಯರವರು ತೀರಿಕೊಂಡು 30 ವರ್ಷ ಆಗಿರುತ್ತದೆ. ಕಾಂತಯ್ಯರವರ ಮನೆಗೆ ನಾನು ಸಣ್ಣವನಿದ್ದಾಗನಿಂದ ಇದ್ದೇನೆ. ಕಾಂತಯ್ಯರವರ ಹೆಂಡತಿ ಪಾರ್ವತೆವ್ವ ತೀರಿಕೊಂಡಿರುತ್ತಾರೆ. ಪಾರ್ವತೆವ್ವ ಮತ್ತು ಕಾಂತಯ್ಯರವರು ತೀರಿಕೊಂಡು ಅವರ ಅಂತಿಮ ಸಂಸ್ಕಾರ ನಾನೇ ಮಗನಾಗಿ ಮಾಡಿರುತ್ತೇನೆ. ನಾನು ಕಾಂತಯ್ಯರವರ ಮನೆಗೆ ದತ್ತಕ ಹೋಗಿದ್ದರಿಂದ ಜನಕ ತಂದೆಯ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನಾನು ಕಾಂತಯ್ಯರವರ ದತ್ತಕ ಹೋಗಲಿಲ್ಲ ಎಂದು ನುಡಿಯುತ್ತಾರೆ . ಎಲ್ಲ ಆಸ್ತಿಯಲ್ಲಿ ಎಲ್ಲ ದಾಖಲೆಗಳು ಆಗಿರುತ್ತದೆ. ಸಾಕ್ಷಿಯು ಮುಂದುವರೆದು ನನಗೆ ಮೋಸ ಮಾಡಿ ನನ್ನ ಅಣ್ಣ ತಮ್ಮಂದಿರು ತಮ್ಮ ಹೆಸರನ್ನು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನನ್ನ ಅಣ್ಣನ ಹೆಸರಿನಲ್ಲಿ ತಪ್ಪು ಖಾತೆ ಇರುವ ಬಗ್ಗೆ ಈ ದಾವೆಯನ್ನು ಬಿಟ್ಟು 10-12 ವರ್ಷಗಳಿಂದ ಮತ್ತ್ಯಾವುದೇ ದಾವೆಯನ್ನು ಅಥವಾ ತಕರಾರನ್ನು ಹಾಕಿರುವುದಿಲ್ಲ. ಕಾಂತಯ್ಯರವರಿಗೆ ದತ್ತಕ ಹೋಗಿದ್ದರಿಂದ ಜನಕ ತಂದೆ ಚಂದ್ರಶೇಖರಯ್ಯವರ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಿಮ್ಮ ತಂದೆ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಓದಲು ಬರೆಯಲು ಬರುವುದಿಲ್ಲ ಎಲ್ಲ ದಾಖಲೆಗಳನ್ನು ಹಾಜರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಕೋಣನಕೇರಿ ಪಂಚಾಯಿತಿ ಆಸ್ತಿ ನಂ 20/ಎ1, 20/ಬಿ, 20/ಸಿ, 20/ಡಿ , 20/ಇ ಎಲ್ಲವೂ ಮನೆ ಆಸ್ತಿಗಳಾಗಿರುತ್ತದೆ. ಸದರಿ ಆಸ್ತಿಗಳ ಉದ್ದ, ಅಗಲ ಮತ್ತು ಚಕುಬಂದಿಯನ್ನು ಬರೆಸಿರುವುದಿಲ್ಲ ಎಂದರೆ ಸರಿ. ಕಾಂತಯ್ಯರವರು ಅಂದಲಗಿಯಲ್ಲಿ ಇರುತ್ತಾರೆ . ಅಂದಲಗಿಯಲ್ಲಿ ನನ್ನ ಆಧಾರ ಕಾರ್ಡ ಮತ್ತು ಮತದಾನದ ಚೀಟಿ ಇರುತ್ತದೆ. ಅದರಲ್ಲಿ ಉಮೇಶ ತಂದೆ ಕಾಂತಯ್ಯ ಹಿರೇಮಠ ಎಂದು ನಮೂದು ಇರುತ್ತದೆ ಎಂದರೆ ಸರಿ. ಈ ರೀತಿ 20 ವರ್ಷಗಳ ಇಂದ ನಮೂದು ಇರುತ್ತದೆ .ನನಗೆ ಉಮೇಶ ಮತ್ತು ಉಮೇಶಯ್ಯ ಎಂದು ಕರೆಯುತ್ತಾರೆ. ಅಂದಲಗಿಗೆ ಹೋದನಂತರ ಕಾಂತಯ್ಯರವರ ಸಾಕುಮಗ ಎಂದು ನನ್ನ ಆದಾರ ಕಾರ್ಡ ಮತ್ತು ಮತದಾನ ಚೀಟಿಯಲ್ಲಿ ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆಯು ಮಾಡಿಲ್ಲ ಕಾಂತಯ್ಯರವರು

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಉಮೇಶಯ್ಯ ಕಾಂತಯ್ಯ ಹಿರೇಮಠ ಎಂದು ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಕಾನೂನು ಬಾಹೀರವಾಗಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಬರೀ ಉಮೇಶ ಎಂದು ನನ್ನ ದಾಖಲೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತರ ಕುಟುಂಬದ ಅವಲಂಬಿತರು ಯಾದಿ ಮತ್ತು ವಂಶವೃಕ್ಷವನ್ನು ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಹಶಿಲ್ದಾರ ಅವರಿಂದ ವಾರಸಾ ಪ್ರಮಾಣ ಪತ್ರವನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.